**IN THE COURT OF THE SENIOR CIVIL JUDGE AND JMFC, TIPTUR.**

**OS No. 27/2022**

**PW-1**

**Oath is Administered to the Witness on 02.08.2025.**

**Further Cross Examination by: Sri. T.K.R Counsel for Defendant**

ನಾನು ನಿಪಿ-8 ಕ್ರಯಪತ್ರವನ್ನು ಹಾಜರು ಪಡಿಸಿದ್ದು ಅದು ನನ್ನ ಗಂಡನ ಗಮನಕ್ಕೆ ಇತ್ತು ಎಂದರೆ ನಿಜ. ದಾವಾ ಆಸ್ತಿ ನಂ. 2 ವಾಸದ ಮನೆಯಾಗಿದ್ದು ಅದು ಸುಮಾರು 50-60 ವರ್ಷಗಳ ಹಳೆಯ ಮನೆ ಎಂದರೆ ನಿಜ. ಪ್ರತಿವಾದಿಯು ದಾವಾ ಐಟಂ ನಂ. 2 ವಾಸದ ಮನೆಯನ್ನು ಸುಮಾರು 2-3 ಲಕ್ಷ ಖರ್ಚು ಮಾಡಿ ಪುನರ್ ನವೀಕರಣ ಮಾಡಿಸಿಕೊಂಡಿರುತ್ತಾರೆ ಎಂದರೆ ನಿಜ. ಈಗ ನನಗೆ ತೋರಿಸುತ್ತಿರುವ ಪೋಟೋದಲ್ಲಿ ಇರುವ ಮನೆ ಅದೇ ಆಗಿದೆ ಎಂದರೆ ನಿಜ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿರುವ ವ್ಯಕ್ತಿಗಳು ಪ್ರತಿವಾದಿ ಮತ್ತು ಆತನ ಹೆಂಡತಿ ಎಂದರೆ ನಿಜ. ಈಗ ನನಗೆ ತೋರಿಸುತ್ತಿರುವ ಹಳೆಯ ಮನೆಯು ನಾವು ವಾಸಮಾಡುತ್ತಿರುವ ಮನೆಯಾಗಿದ್ದು ಅದು ದಾವಾ ಐಟಂ ನಂ.1 ರಲ್ಲಿ ಇದೆ ಎಂದರೆ ನಿಜ. ಸದರಿ ಪೋಟೋವನ್ನು ನಿಡಿ-2 ಎಂದು ಗುರುತಿಸಲಾಯಿತು. ನನ್ನ ಮಗಳ ಮದುವೆ ನಂತರ ನಾವು ಆ ಮನೆಯಲ್ಲಿ ವಾಸಿಸುತ್ತಿಲ್ಲ ಎಂದರೆ ನಿಜ. ಈಗ ನನಗೆ ತೋರಿಸುತ್ತಿರುವ ಪೋಟೋದಲ್ಲಿರುವ ನಿವೇಶನವು ದಾವಾ ಐಟಂ ನಂ. 1 ರಲ್ಲಿನ ಮನೆ ಪಕ್ಕ ಇರುವ ಉಳಿದ ಜಾಗ ಎಂದರೆ ನಿಜ. ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ನಿವೇಶನದಲ್ಲಿ ಪ್ರತಿವಾದಿಯೇ ಅನುಭವದಲ್ಲಿದ್ದಾರೆ ಎಂದರೆ ನಿಜ. ನನ್ನ ಅತ್ತೆ ಜಯಮ್ಮರವರು ಪ್ರತಿವಾದಿಯ ಹೆಸರಿಗೆ ದಾವಾ ಐಟಂ ನಂ. 3 ದಾನಪತ್ರ ಮಾಡುವ ಸಮಯದಲ್ಲಿ ನನ್ನ ಗಂಡ ಬದುಕಿದ್ದು, ಎಂದರೆ ನಿಜ.

ಸದರಿ ಜಮೀನಿಗೆ ಅಭಿವೃದ್ಧಿಗಾಗಿ ಪ್ರತಿವಾದಿಯು ಸುಮಾರು 5 ಲಕ್ಷ ರೂ. ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾನಪತ್ರದ ಆಧಾರದ ಮೇಲೆ ಖಾತೆ ಮಾಡಬಾರದು ಎಂದು ನನ್ನ ಗಂಡ ತಕರಾರು ಮಾಡಿಲ್ಲ ಎಂದರೆ ನಿಜ. ಸಾಕ್ಷಿಯು ಆತನಿಗೆ ಆರೋಗ್ಯ ಸಮಸ್ಯೆ ಇದ್ದ ಕಾರಣ ಮಾಡಿಲ್ಲ ಎಂದು ಹೇಳುತ್ತಾರೆ. ನನ್ನ ಗಂಡ ಸದರಿ ದಾನಪತ್ರವನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ನಿಜ. ಸಾಕ್ಷಿಯು ಆತನಿಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ದಾವಾ ಐಟಂ ನಂ. 3 ರ ಪಹಣಿಯು ನನ್ನ ಅತ್ತೆಯ ಹೆಸರಿಗೆ ಮಾತ್ರ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಜಂಟಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಅತ್ತೆ ಮತ್ತು ಪ್ರತಿವಾದಿಯು ಜೊತೆಯಲ್ಲಿರುವಾಗ ನಾವು ಅನ್ಯೂನ್ಯವಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಅತ್ತೆ ಮತ್ತು ನಮ್ಮ ಕುಟುಂಬವನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ. 4 ಜಂಟಿಯಾಗಿ ಖಾತೆ ಇಡಲು ನಾವು ತಕರಾರು ಮಾಡಿಲ್ಲ. ದಾವಾ ಐಟಂ ನಂ. 1 ರಿಂದ 3 ಸ್ವತುತಗಳ ಖಾತೆ ಆಗುವ ಸಮಯದಲ್ಲಿ ನಾವು ತಕರಾರು ಮಾಡಿಲ್ಲ ಎಂದರೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡ ಸಕ್ಕರೆ ಖಾಯಿಲೆಯಿಂದ ನರಳಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಮರಣ ಹೊಂದಿದ್ದರು ಎಂದರೆ ನಿಜ. ನನ್ನ ಗಂಡ ಅನಾರೋಗ್ಯದಿಂದ ಬಳಲುತ್ತಿದ್ದಾಗ ಪ್ರತಿವಾದಿಯೇ 5 ಲಕ್ಷ ರೂ. ಸಾಲವನ್ನು ಚಿಕಿತ್ಸೆಗಾಗಿ ನಮಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಚಾರ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ.

2 ನೇ ವಾದಿಯ ಮದುವೆಯು ನನ್ನ ಗಂಡ ಮರಣ ಹೊಂದಿದ ಬಳಿಕ ಆಗಿತ್ತು ಎಂದರೆ ನಿಜ. ಮದುವೆಯ ಕಾಲದಲ್ಲಿಯೂ ಸಹ ಪ್ರತಿವಾದಿಯು ಮದುವೆ ಖರ್ಚಿಗಾಗಿ 5 ಲಕ್ಷ ಸಾಲ ಕೊಟ್ಟಿದ್ದರು ಎಂದರೆ ಸರಿಯಲ್ಲ. ಮೇಲೆ ಹೇಳಿದ ಹಣಕ್ಕಾಗಿ ನಾವು ದಾವಾ ಐಟಂ ನಂ. 1 ರ ನಿವೇಶನ ಮತ್ತು ದಾವಾ ಐಟಂ ನಂ. 2 ರ ವಾಸದ ಮನೆ ಮತ್ತು ದಾವಾ ಐಟಂ ನಂ. 3 ಸ್ವತ್ತುಗಳನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದೆವು

ಎಂದರೆ ಸರಿಯಲ್ಲ. ನನ್ನ ಅತ್ತೆ ಬದುಕಿದ್ದಾಗ ನಾವು ಯಾವುದೇ ದಾವೆ ಸಲ್ಲಿಸಿರಲಿಲ್ಲ ಎಂದರೆ ನಿಜ. ನನ್ನ ಅತ್ತೆ ಬದುಕಿರುವಾಗ ದಾವೆ ಸಲ್ಲಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಆ ರೀತಿ ದಾವೆ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಬದುಕಿದ್ದಾಗ ದಾವೆ ಹಾಕಿದರೆ ನಮ್ಮ ಅತ್ತೆಗೆ 3 ನೇ 1 ಭಾಗ ಬರುತ್ತಿತ್ತು ಮತ್ತು ಅದನ್ನು ಪ್ರತಿವಾದಿಗೆ ಕೊಡಬಹುದು ಎನ್ನುವ ಉದ್ದೇಶದಿಂದ ಆ ಸಮಯದಲ್ಲಿ ನಾನು ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ಸೌಲಭ್ಯಗಳನ್ನು ಪಡೆದು ಕೊಂಡು ಮತ್ತು ಪ್ರತಿವಾದಿ ಕೊಟ್ಟಂತಹ 10 ಲಕ್ಷ ರೂ. ಹಣವನ್ನು ಕೊಡದೆ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳುದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮರಣ ಹೊಂದಿದ ಬಳಿಕ ಪ್ರತಿವಾದಿಯು ನಮಗೆ ದಾವಾ ಐಟಂ ನಂ. 1 ರಲ್ಲಿನ ಮನೆ ಮತ್ತು ದಾವಾ ಐಟಂ ನಂ. 4 ರಲ್ಲಿ ಜಮೀನಿನಲ್ಲಿ ಜಂಟಿ ಹೆಸರು ನಮಗೆ ಅನುಕೂಲ ಮಾಡಿಕೊಡಲು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ನಿವೇಶನದಲ್ಲಿ ಮತ್ತು ದಾವಾ ಐಟಂ ನಂ. 2 ಮತ್ತು 3 ರಲ್ಲಿ ನಮಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಅತ್ತೆಯ ಶವಸಂಸ್ಕಾರಗಳನ್ನು ಪ್ರತಿವಾದಿಯೇ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಳಿಯ ನನ್ನ ಮಗಳಿಗೆ ಒತ್ತಾಯ ಮಾಡಿ ನನ್ನ ಕಡೆಯಿಂದ ಈ ದಾವೆ ಹಾಕಿಸಿದ್ದಾನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಸ್ವತ್ತಿಗೆ ನನ್ನ ಅತ್ತೆ ನನ್ನ ಗಂಡನ ಗಮನಕ್ಕೆ ತಂದು ದಾನಪತ್ರವನ್ನು ಪ್ರತಿವಾದಿಯ ಹೆಸರಿಗೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರಲ್ಲಿನ ಮನೆ ಮತ್ತು 4 ನೇ ಐಟಂ ಸ್ವತ್ತಿಗೆ ಮಾತ್ರ ನಾವು ಭಾಗಕ್ಕೆ ಅರ್ಹರಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ನಮಗೆ ಯಾವುದೇ ಮಾಹಿತಿ ಇರಲಿಲ್ಲ ಅದ್ದರಿಂದ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ನಾನು ಸುಳ್ಳು ಮಾಹಿತಿ ನೀಡಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ

ಹೇಳುತಿಶ್ತಿದ್ದೇನೆ ಎಂದರೆ ಸರಿಯಲ್ಲ.

**Re-examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR